# ವಿದುರಾಶ್ವತ್ಥದ ದುರಂತಗಾಥೆ

## ಕರ್ನಾಟಕದಲ್ಲೊಂದು ಜಲಿಯನ್ ವಾಲಾಬಾಗ್

**ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥ ಮಹಾಭಾರತದ ಕಥನದ ನಂಟಿನೊಂದಿಗೆ, ಆಧುನಿಕ ಭಾರತದ ಸ್ವಾತಂತ್ರ್ಯ ಸಂಗ್ರಾಮದ ನೆನಪುಗಳ ಕಾರಣಕ್ಕೂ ಮಹತ್ವ ಪಡೆದಿದೆ.**

■ ಡಿ.ಎಂ. ಕುರ್ಕೆ ಪ್ರಶಾಂತ್

1938ರ ಏಪ್ರಿಲ್ 25. ಗೌರಿಬಿದನೂರು ತಾಲ್ಲೂಕಿನ ಉತ್ತರ ಪಿನಾಕಿನಿ ನದಿ ದಂಡೆಯ ವಿದುರಾಶ್ವತ್ಥ ಗ್ರಾಮದ ವಿದುರ ನಾರಾಯಣಸ್ವಾಮಿ ದೇಗುಲದ ಹಿಂಬದಿಯ ಅರಳೀಮರಗಳ ತೋಪಿನಲ್ಲಿ ಕೋಲಾರ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಭೆ. ಕಾಂಗ್ರೆಸ್ ಪಕ್ಷದ ರಾಜ್ಯ ನಾಯಕ ಚಂಗಲರಾಯರೆಡ್ಡಿ ಸೇರಿದಂತೆ ಘಟಾನುಘಟಿ ನಾಯಕರು ಪಾಲ್ಗೊಂಡಿದ್ದರು. ಅಂದು ವಿದುರ ನಾರಾಯಣಸ್ವಾಮಿಯ ತೇರು ಸಹ ಇತ್ತಂತೆ.

ಸಭೆ ಆರಂಭವಾಗುವ ಮುನ್ನವೇ ಶಸ್ತ್ರಸಜ್ಜಿತ ಬ್ರಿಟಿಷ್ ಪೊಲೀಸರು ಸುತ್ತುವರಿದಿದ್ದರು. ಬ್ರಿಟಿಷ್ ಪಡೆ ಸಭೆ ನಡೆಸಲು ಅವಕಾಶ ನೀಡಲಿಲ್ಲ. ದೊಡ್ಡ ಪ್ರಮಾಣದಲ್ಲಿದ್ದ ಜನರೂ ಸ್ಥಳದಿಂದ ಕದಲಲಿಲ್ಲ. ಜನರು ಬೆದರಿಕೆಗೆ ಜಗ್ಗದಿದ್ದಾಗ ಪೊಲೀಸರು ಗುಂಡಿನ ಮಳೆಗರೆದರು. ಹೆಣಗಳು ನೆಲಕ್ಕೆ ಉರುಳಿದವು. ಸರ್ಕಾರದ ದಾಖಲೆಯ ಪ್ರಕಾರ 9 ಹೋರಾಟಗಾರರು ಹತ್ಯೆಯಾದರು. ಆದರೆ 32ಕ್ಕೂ ಹೆಚ್ಚು ಚಳವಳಿಗಾರರು ಬಲಿಯಾದರು ಎನ್ನುವ ಮಾತುಗಳಿವೆ.

ರಾಷ್ಟ್ರದ ಗಮನಸೆಳೆದ ಈ ಹತ್ಯಾಕಾಂಡದ ಬಗ್ಗೆ ಮಾಹಿತಿ ತಿಳಿಯಲು ಆಗಿನ ಕಾಂಗ್ರೆಸ್ ಕಾರ್ಯದರ್ಶಿ ಸರ್ದಾರ್ ವಲ್ಲಭಬಾಯಿ ಪಟೇಲ್, ಜೆ.ಬಿ. ಕೃಪಲಾನಿ ವಿದುರಾಶ್ವತ್ಥಕ್ಕೆ ಬಂದರು. ಹಳೇ ಮೈಸೂರು ಪ್ರಾಂತ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚು ತೀವ್ರವಾಗಿ ಹರಡಲು ಈ ಘಟನೆ ಪ್ರಮುಖವಾಯಿತು.

ವಿದುರಾಶ್ವತ್ಥದ ಘಟನೆಯ ಬಳಿಕ ಮಹಾತ್ಮ ಗಾಂಧೀಜಿ, ಮೈಸೂರು ಕಾಂಗ್ರೆಸ್‌ನೊಂದಿಗೆ ಹೆಚ್ಚಿನ ಸಂಪರ್ಕ ಸಾಧಿಸಿದರು. ಪ್ರಕರಣ ನಡೆದ ಮರು ವರ್ಷವೇ 1939ರಲ್ಲಿ ಎಚ್.ಸಿ. ದಾಸಪ್ಪ ಅವರ ಅಧ್ಯಕ್ಷತೆಯಲ್ಲಿ ವಿದುರಾಶ್ವತ್ಥದಲ್ಲಿಯೇ ಮೈಸೂರು ರಾಜ್ಯ ಕಾಂಗ್ರೆಸ್ ಎರಡನೇ ಸಮ್ಮೇಳನ ಜರುಗಿತು. ಈ ದಾಳಿಯ ಬಗ್ಗೆ ಗಾಂಧೀಜಿ 'ಹರಿಜನ' ಪತ್ರಿಕೆಯಲ್ಲಿ ಪ್ರಸ್ತಾಪಿಸಿದ್ದರು.

ದೇಶದ ಸ್ವಾತಂತ್ರ್ಯ ಚಳವಳಿಗೆ ಸಂಬಂಧಿಸಿದಂತೆ ಮೈಸೂರು ರಾಜ್ಯದಲ್ಲಿ ನಡೆದ ಹೋರಾಟಗಳನ್ನು ಸ್ಮರಿಸುವಾಗ ವಿದುರಾಶ್ವತ್ಥ ಗ್ರಾಮದಲ್ಲಿ ನಡೆದ ಈ ಹತ್ಯಾಕಾಂಡ ಮತ್ತು ಜನರ ಹೋರಾಟ ಪ್ರಮುಖವಾಗಿ ದಾಖಲಾಗುತ್ತದೆ.

ಗೌರಿಬಿದನೂರಿನಿಂದ ಹಿಂದೂಪುರ ರಸ್ತೆಯಲ್ಲಿ ಸಿಗುವ ವಿದುರಾಶ್ವತ್ಥ ಗ್ರಾಮ 'ಕರ್ನಾಟಕದ ಜಲಿಯನ್ ವಾಲಾಬಾಗ್' ಎಂದೇ ಹೆಸರಾಗಿದೆ. ಗ್ರಾಮದ ಮುಖ್ಯ

### ಸ್ವಾತಂತ್ರ್ಯ ಹೋರಾಟ ಕಟ್ಟಿಕೊಡುವ ಚಿತ್ರಪಟ ಗ್ಯಾಲರಿ

ವಿದುರಾಶ್ವತ್ಥದ ಹೃದಯ ಅಂದರೆ ಅದು ಚಿತ್ರಪಟ ಗ್ಯಾಲರಿ. ಇಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ 104 ಚಿತ್ರಪಟಗಳಿವೆ. ಗ್ಯಾಲರಿ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಕಥನಗಳನ್ನು ಕಣ್ಣಿಗೆ ಕಟ್ಟಿದಂತೆ ಕಾಣಿಸುತ್ತದೆ. ವಿದುರಾಶ್ವತ್ಥದಲ್ಲಿ ಅಂದು ನಡೆದ ಹತ್ಯಾಕಾಂಡದ ಚಿತ್ರಗಳೂ ಇಲ್ಲಿವೆ.

ಹೋರಾಟದಲ್ಲಿ ಪಾಲ್ಗೊಂಡಿದ್ದ ಎಚ್‌ನಾಗಸಂದ್ರದ ನರಸಿಂಹಯ್ಯ ಮತ್ತು ಗಂಗಯ್ಯ ಅವರು ನೀಡಿದ ಮಾಹಿತಿ ಆಧರಿಸಿ ಅಂದಿನ ಹೋರಾಟದ ಸನ್ನಿವೇಶದ ಚಿತ್ರವನ್ನು ಬಿಡಿಸಲಾಗಿದೆ.





### ಗ್ಯಾಲರಿ ರೂವಾರಿ ಬಿಜಿಎಂ

ವಿದುರಾಶ್ವತ್ಥದ ಮುಖ್ಯ ಆಕರ್ಷಣೆ ಚಿತ್ರಪಟ ಗ್ಯಾಲರಿಯನ್ನು ರೂಪಿಸಿದವರು ಸಾಮಾಜಿಕ ಹೋರಾಟಗಾರ ದಿವಂಗತ ಪ್ರೊ. ಬಿ. ಗಂಗಾಧರಮೂರ್ತಿ. ಬೇರೆ ಬೇರೆ ರಾಜ್ಯಗಳ ಗ್ಯಾಲರಿಗಳನ್ನು ವೀಕ್ಷಿಸಿದ ನಂತರ ಅವರು 2006ರಲ್ಲಿ ಚಿತ್ರಪಟ ಗ್ಯಾಲರಿ ರೂಪಿಸಿದರು.

2022ರ ಆಗಸ್ಟ್‌ನಲ್ಲಿ 'ಪ್ರಜಾವಾಣಿ' ಜೊತೆ ಮಾತನಾಡಿದ್ದ ಪ್ರೊ. ಬಿ. ಗಂಗಾಧರ ಮೂರ್ತಿ, 'ವಿದುರಾಶ್ವತ್ಥ ಹೋರಾಟದಲ್ಲಿ